ಶ್ರೀ ಮಾಲ ಮರಿಯಪ್ಪ.—ಸಾಕಷ್ಟು ಕಾಲಾವಕಾಶ ಕೊಟ್ಟಿದೆ. ಈಗ ಉಳಿದಿರುವುದು ಎರಡು ಮಾರ್ಗಗಳು. ಒಂದನೆಯದು ಅವರ ಮೇಲೆ disputes ಹಾಕುವುದು. ಎರಡನೆಯದು disputes ನಲ್ಲಿ ಸಹಕಾರ ಮಾಡದೆ ಹೋದರೆ supersession ಮಾಡತಕ್ಕದ್ದು.

ಶ್ರೀ ಡಿ. ಎಚ್. ರುದ್ರಪ್ಪ.—ಹಾಗಾದರೆ ಹೊಸದಾಗಿ ಸಾಲ ಕೇಳುವುದರಲ್ಲಿ ಅವರು ಮಾಡಿರುವ ತಪ್ಪು ಏನು ?

ಶ್ರೀ ಮಾಲ ಮರಿಯಪ್ಪ.—ಸ್ಯಾನೇಜ್‌ಮೆಂಟ್ ಬರಿಯೆ ಸಾಲವನ್ನು ತೆಗೆದುಕೊಂಡುಹೋಗಿ ಹಂಚುವುದಲ್ಲ, ಕೊಟ್ಟ ಸಾಲವನ್ನೂ ವಸೂಲು ಮಾಡುವುದಕ್ಕೂ ಸಮಾನವಾಗಿ ಜವಾಬ್ದಾರರು.

Grant of Tank Bed of Rayara Kallahalli to Political Sufferers.

*Q.—318. Sri K. H. VENKATA REDDY (Gauribidanur).—

Will the Government be pleased to state :—

(*a*) whether it is a fact that some political sufferers have applied for the grant of land in Rayara Kallahalli Tank in Gauribidanur Taluk ;

(*b*) if so whether they intend to give the tank bed for cultivation ?

A.—Sri KADIDAL MANJAPPA (Minister for Revenue).—

(*a*) Yes

(*b*) This is under examination.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—(ಬ) ಭಾಗಕ್ಕೆ ಉತ್ತರವಾಗಿ ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಕೊಟ್ಟಿದ್ದಾರೆ. ಕೆರೆ ತುಂಬ ನೀರಿದ್ದು ಅದರ ಕೆಳಗಿನ ಅಚ್ಚುಕಟ್ಟು ಸಾಗುವಳಿಯಾಗುತ್ತಿದ್ದರೂ ಕೂಡ ಕೆರೆಯ ಅಂಗಳವನ್ನು ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಅಧ್ಯಕ್ಷರು.—ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂದು ಹೇಳಿಲ್ಲ. ಪರಿಶೀಲನೆ ಮಾಡಲಾಗುವುದು ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಸರ್ಕಾರದವರ ಪರಿಶೀಲನೆಯಲ್ಲದೆ ಎಂದು ಹೇಳಿದ್ದಾರೆ. ಕೆರೆಯಲ್ಲ ನೀರಿದ್ದು 120 ಎಕರೆ ಅಚ್ಚುಕಟ್ಟು ಇದೆ. ಈ ಕೆರೆ ಕಟ್ಟೆಯನ್ನು ಒಡೆದುಹಾಕಿ ಕೆರೆ ಅಂಗಳವನ್ನು ಸಾಗುವಳಿಗೆ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

†ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿ ಹಾಕಿದ್ದಾರೆ. ಅವುಗಳ ಪೆರಿಟ್ ಮೇಲೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕೆರೆ ಒಡೆಯು ಜಮೀನು ಕೊಡಿ ಎಂದು ಕೇಳಿ ತಕ್ಕ ಜನರೂ ಇದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಅಚ್ಚುಕಟ್ಟುದಾರರೆಲ್ಲ ಕೆರೆಯನ್ನು ಕೊಡಬಹುದೆಂದು ಒಪ್ಪಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಗ್ರಾಮಸ್ಥರು ತಕರಾರು ಮಾಡುತ್ತಿದ್ದಾರೆಂದು ಜಿಲ್ಲಾಧಿಕಾರಿಗಳು ವರದಿ ಮಾಡಿದ್ದಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪಬ್ಲಿಕ್ ವರ್ಕ್ಸ್ ಇಲಾಖೆಯವರ ಅಭಿಪ್ರಾಯವೇನು ? ಕೆರೆ ಒಡೆಯ ಬೇಕೆಂದು ತಿಳಿಸಿದ್ದಾರೆಯೇ ಅಥವಾ ಇಟ್ಟುಕೊಳ್ಳಿ ಬೇಕೆಂದು ತಿಳಿಸಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ತಿಂಗಳುಗಳ ಹಿಂದೆ ಅರ್ಜಿ ಕೊಟ್ಟಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು consult ಮಾಡಬೇಕಾಗುತ್ತದೆ.

Donation of Land by Inamdars to Educational Institutions in Dharwar District.

*Q.—135. Sri A. J. DODDAMETI (Ron).—

Will the Government be pleased to state :—

(*a*) whether it is a fact that the Deputy Commissioner of Dharwar District has granted permission to the inamdars of Benakanahalli, Kundgolpetha in Dharwar District to donate certain lands situated in the above villages to some educational institutions ;

(*b*) if so, the total acreage of land so permitted to be donated ;

(*c*) the acreage of land donated so far to each institution under the orders of the Deputy Commissioner together with the names of institutions (particulars of orders together with number and date may be furnished) ;

(*d*) the conditions subject to which the donor inamdars have donated lands to those institutions ;

(*e*) whether it is not a fact that as per G.O.R.D. No. R.D. WTN. 13 of 13th November 1958, the above village has been declared to be a Jagir village and that it, therefore, comes within the purview of the Bombay Merged Areas (Jagirs Abolition) Act, 1953 ?

A.—Sri KADIDAL MANJAPPA (Minister for Revenue).—

(*a*) Yes.

(*b*) 616 acres, 28 guntas.

(SRI KADIDAL MANJAPPA)

(c)—

Sl. No.	Name of the institution	Area of land permitted to be donated	Particulars of Deputy Commissioner's Order
		A. G.	
1.	The Shikshana Samiti, Kundgol ...	301-24	TENSR-2127 of 7th September 1958.
2.	The Janata Shikshana Samiti, Dharwar.	296-15	TENSR-2129 of 7th September 1958.
3.	The New Education Society, Hubli	18-29	TENSR-2140 of 7th September 1958.
	Total ...	616-28	

(d) *Vide* note given below.

(e) Yes.

I. Shikshan Samiti, Kundgol.

1. Out of the income derived from the lands donated or the interest derived on the sale proceeds of the lands, half should be utilised for the development of the institution and the remaining half should be utilised for granting scholarships.

2. If necessary, half the sale proceeds of the lands donated may be utilised for acquiring immovable property to the institution.

3. If possible, the institution or the future constructions of the institution should bear the name of his father (Donor's father Shri Rangangouda).

4. While granting scholarships, the following conditions should be observed:

(a) Half the amount of scholarship should go to poor Brahmin students (male or female).

(b) The remaining half should go to poor students of other castes.

(c) Preference should be given to lady students.

5. Two scholarships at a time should be granted to the students of Nadgir's family if there be any such students.

6. While granting scholarships the donor's prior approval should be obtained during his life time and after his death, from the person nominated by him.

II. Janata Shikshan Samiti, Dharwar.

1. The income or the sale proceeds derived from half the portion of the lands donated should be utilised for the upliftment of the institution.

2. Any one of the schools or colleges run by the institution should be in the name of his father Shri Rangangouda.

3. The interest on the income or the sale proceeds derived from the remaining half portion of the lands should be utilised for granting scholarships in the name of his father Shri Rangangouda, to the students studying in the colleges of the institution, preference being given to lady students and the students of Shri Nadgir's family.

4. The interest derived on the remaining half amount should be utilised for granting scholarships to other students as far as possible.

5. While granting scholarships the donor's prior approval should be obtained during his life time and after his death, from the person nominated or authorised by him.

III. The New Education Society, Hubli

The amount realised by the sale of the land should be utilised for the construction of a Science Hall in the name of his mother.

2 P.M.

ಶ್ರೀ ಎ. ಜೆ. ದೊಡ್ಡಮೇಟಿ.—1953 ನೆಯ ಇಸವಿಯಿಂದು ಜಮೀನುಗಳ ಹಕ್ಕುದಾರರು ರೈತರೇ ಆಗುತ್ತಾರೆ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ? ರೈತರ ಹೆಸರು ಹಚ್ಚಲಿಕ್ಕೆ ಬೊಂಬಾಯಿ ಅಪೆಂಡ್ ಮೆಂಟಿನ ಪ್ರಕಾರ ಅವಧಿ ಕಳೆದುಹೋಗಿದೆ. ಈ ಬಗ್ಗೆ ಸರ್ಕಾರದವರು ಬೇಗನೆ ಅಪೆಂಡ್‌ಮೆಂಟ್ ತಂದು ರೈತರ ಹೆಸರು ಹಚ್ಚಲಿಕ್ಕೆ ಅನುಕೂಲ ಮಾಡಿಕೊಡುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಎ. ಜೆ. ದೊಡ್ಡಮೇಟಿ.—ಇದರಿಂದ ಜಹಗೀರು ದಾರರ ಕಾಯಿದೆ ಆಗಲು ಆಗಿ ಇನಾಮ್‌ದಾರರು ಮಾಡಿ ಕೊಟ್ಟ ದಾನ ಪತ್ರ ರದ್ದುಗೊಳಿಸಲ್ಪಡುತ್ತದೆ ಎಂಬುದು ನಿಜವೇ?

ಶ್ರೀ ಕಡಿದಾಳ್ ಮಂಜಪ್ಪ.—1954 ನೆಯ ಇಸವಿಯಿಂದ ಪರಭಾರೆ ಆಗಿದ್ದರೆ ಏನು ಮಾಡಬೇಕಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎ. ಜೆ. ದೊಡ್ಡಮೇಟಿ.—1953 ನೆಯ ಇಸವಿಯ ಕಾನೂನಿಗೆ ಒಳಪಡುತ್ತದೆ ಎಂದು ಹೇಳುತ್ತೀರಿ; ಇಲ್ಲ ಎಂದು ತಾನೆ ದಾನಪತ್ರ ಮಾಡಿ ಕೊಟ್ಟಿದ್ದಾರೆ. ಈ ಕಾಯಿದೆಯನ್ನು ಅನುಸರಿಸಿ ಆ ಕಾರಣ ಕ್ಕಾಗಿ ದಾನಪತ್ರ ಅವತ್ತೇ ರದ್ದು ಆಯಿತು. ಆ ರೀತಿ ಪತ್ರ ರಿಜಿಸ್ಟರ್ ಮಾಡಬಾರದು ಎಂದು ರೆವಿನ್ಯೂ ಅಧಿಕಾರಿಗಳಿಗೆ ಅಪ್ಪಣೆ ಏಧಿನುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಲಾ ಡಿಪಾರ್ಟ್‌ಮೆಂಟ್ ಪರಿಶೀಲನೆ ನಡೆಸಿ ಅನಂತರ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಕೆ. ಕಂಬ್ಳಿ.—ಕುಂಡಗೋಳ್ ಹೇಠಾಗ್ರಾಮದಲ್ಲಿ ಎಷ್ಟು ಎಕರೆ ಜಮೀನು ಇದೆ?

ಅಧ್ಯಕ್ಷರು.—ಮಾನ್ಯ ಸದಸ್ಯರು ಆ ಕಡೆಯಿಂದ ಬಂದಿರುವವರು; ಅವರಿಗೆ ಗೊತ್ತಿದೆ.

ಶ್ರೀ ಟಿ. ಕೆ. ಕಂಬ್ಳಿ.—ಇರುವ ಜಮೀನನ್ನು ಗೌರ್ಮೆಂಟಿಗೆ ದಾನವಾಗಿ ಕೊಡುತ್ತಿದ್ದಾರೆ. ನಮ್ಮ ಹೆಲ್ತ್ ಮಿನಿಸ್ಟರು ಆ ಕಡೆಗೆ ಬಂದಾಗ್ಗೆ ಅವರು ಕೊಟ್ಟಿದ್ದನ್ನು ಒಲ್ಲೆ ಎಂದು ಹೇಳಿದ್ದು ನಿಜವೇ?

Sri KADIDAL MANJAPPA.—I want notice.

Principles followed in the Preparation of Third Five-Year Plan.

*Q.—310. Sri M. M. PATEEL (Hadagalli).—

Will the Government be pleased to state:—

(*a*) whether they have sought the views of the Legislators and the public at district level while deciding upon the size, outlay, etc., of the Third Five-Year Plan for the State;

(*b*) the main principles usually followed by them while preparing plans of this type?

*A.—Sri B. D. JATTI (Chief Minister).—

(*a*) The "Third Five-Year Plan of Mysore—a draft outline" is under print and will be supplied to all the Members of the Legislature, M.Ps., etc., for their suggestions and comments. Copies will also be made available to the public.

(*b*) Government have not so far received any official communication about the size of the Third Plan from the Planning Commission. The important principles followed in drawing up the draft outline are:—

(a) the essential objective to be fulfilled;

(b) the size or scale of investment required and feasible;

(c) an assessment of the resources required and likely to be available; and

(d) the pattern of investments to be undertaken on a view of priorities and on a balance of immediate as well as long term considerations.

ಶ್ರೀ ಎಂ. ಎಂ. ಪಾಟೀಲ್.—ಉತ್ತರದಲ್ಲಿ ನಿಮ್ಮ ಡ್ರಾಫ್ಟ್ ಪ್ಲಾನುಗಳನ್ನು ಪ್ರಿಂಟ್ ಆದ ಅನಂತರ ಮೆಂಬರುಗಳಿಗೆ ಸಪ್ಲೈ ಮಾಡುತ್ತೇವೆ ಎಂದು ಅಪ್ಪಣೆಕೊಡಿಸಿದ್ದೀರಿ, ಆಯಾ ಭಾಗಗಳಲ್ಲಿ ಏನು ಏನು ಕಾರ್ಯಕ್ರಮ ಆಗಬೇಕು ಎನ್ನುವುದನ್ನು ಮೆಂಬರುಗಳಿಂದ ಮೊದಲೇ ತಿಳಿದುಕೊಳ್ಳುವುದು ಒಳ್ಳೆಯದಲ್ಲವೇ?

Sri B. D. JATTI.—The Government have not taken any final decision. Before taking the final decision, the opinion of the members will be taken; that is why it is said that the draft plan is ready.

ಶ್ರೀ ಎಂ. ಎಂ. ಪಾಟೀಲ್.—ಹಳ್ಳಿಗಾಡಿನವರ ಮನಸ್ಸಿನಲ್ಲಿ ಏನು ಇದೆ; ಆಯಾ ಭಾಗದಲ್ಲಿ ತೊಂದರೆಗಳು ಏನು ಇವೆ ಎಂಬುದಕ್ಕೆ ಜನತೆಯ ಅಭಿಪ್ರಾಯ ತೆಗೆದುಕೊಂಡು ಪ್ಲಾನ್ ತಯಾರುಮಾಡಿದರೆ ಯಶಸ್ವಿಯಾಗುತ್ತದೆ. ಈಗ ಮೇಲಿಂದ ಮೇಲೆ ಪ್ಲಾನುಗಳನ್ನು ಮಾಡುತ್ತಿದ್ದೀರಿ. ಜನತೆಯ ಅಭಿಪ್ರಾಯ ಏನು ಇದೆ, ಅದನ್ನು ತಿಳಿದುಕೊಳ್ಳುವ ಮಾರ್ಗ ಅನುಸರಿಸುತ್ತೀರಾ?

Sri B. D. JATTI.—The same is the intention of the Government also.